**ಸಾಕ್ಷಿಯನ್ನು ದಿನಾಂಕ 9.6.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಎನ್.ಎನ್ ಪರ ವಕೀಲರಿಂದಃ

ನಾನು ಚಾಲಕನಾಗಿ ಕೆಲಸ ಮಾಡುತ್ತೇನೆ. ನನಗೆ ವಾದಿ ಕಳೆದ 20 ವರ್ಷಗಳಿಂದ ಪರಿಚಯನಾಗಿರುತ್ತಾನೆ. ನನಗೆ ಸರಗೂರು ಪಟ್ಟಣದಲ್ಲಿ ಮನೆ ಇರುತ್ತದೆ. ಪ್ರತಿವಾದಿ ಮೂಲತಃ ಬೆಂಗಳೂರಿನವರು. ಅವರ ತಂದೆ ಹೆಸರು ಮತ್ತು ವಿಳಾಸ ಗೊತ್ತಿರುವುದಿಲ್ಲ. ಪ್ರತಿವಾದಿ ವಾದಿಗೆ ಅಳಿಯನಾಗಬೇಕು. ಪ್ರತಿವಾದಿಯು ಸರಗೂರಿಗೆ ಬಂದು ಎಷ್ಟು ವರ್ಷಗಳಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಕೋವಿಡ್ ಸಮಯದಲ್ಲಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ವಾದಿಯ ಮನೆಗೆ ಬರುತ್ತಿದ್ದರಿಂದ ಮತ್ತು ಅವರ ವಾದಿಯ ಅಳಿಯನಾಗಿದ್ದರಿಂದ ಅವರ ಪರಿಚಯ ಇರುತ್ತದೆ. ಪ್ರತಿವಾದಿಯು ಸರಗೂರಿಗೆ ಬಂದ ನಂತರ ಅವರ ಹೆಂಡತಿಯ ಜೊತೆಗೆ ಬೇರೆ ವಾಸ ಮಾಡಿಕೊಂಡಿದ್ದರು. ಅವರ ಹೆಂಡತಿ ಅಂಗನವಾಡಿ ಶಿಕ್ಷಕಿ ಆಗಿರುತ್ತಾರೆ. ವಾದಿ ಮತ್ತು ಪ್ರತಿವಾದಿಯ ಎಲ್ಲಾ ಮನೆಯ ವ್ಯವಹಾರ ನನಗೆ ಗೊತ್ತಿರುವುದಿಲ್ಲ. ನನ್ನನ್ನು ಸಾಕ್ಷಿ ನುಡಿಯಲು ವಾದಿ ಕರೆದುಕೊಂಡು ಬಂದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮನೆಯ ಮೌಲ್ಯ 30 ಲಕ್ಷ ಆಗುತ್ತದೆ. ಅದು ಆರ್.ಸಿಸಿ ಮನೆ ಆಗಿರುತ್ತದೆ. ನಾನಾು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನನ್ನ ಮನೆಯ ಮೌಲ್ಯದ ದಾಖಲಾತಿ ಪಡೆದುಕೊಂಡಿರುತ್ತೇನೆ. ಸರಗೂರು ಪಟ್ಟಣದಲ್ಲಿ ಚದರ ಅಡಿ ಮನೆಯ ಮೌಲ್ಯ ನನಗೆ ಗೊತ್ತಿರುವುದಿಲ್ಲ. ವಾದಿಯ ಮನೆಯ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಅದರ ಖಾತೆ ನಂ ಮತ್ತು ವಿಸ್ತೀರ್ಣ ನನಗೆ ನೆನಪಿಲ್ಲ. ವಾದಿಯ ಮನೆಯ ಚದರ ಅಡಿಗೆ ಎಷ್ಟು ಸರ್ಕಾರಿ ಮೌಲ್ಯ ಎಷ್ಟಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿಯು ಪ್ರತಿವಾದಿಗೆ 23 ಲಕ್ಷಕ್ಕೆ ಮನೆಯನ್ನು ಮಾರಾಟ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ಕೆಳ ಅಂತಸ್ತಿನ ಮನೆಯನ್ನು 23 ಲಕ್ಷಕ್ಕೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮನೆಯನ್ನು ಮಾರಾಟ ಮಾಡುವ ಸಮಯದಲ್ಲಿ ನೋಂದಣಿ ಕಚೇರಿಯಲ್ಲಿ ಹಾಜರು ಇಇರುವುದಿಲ್ಲ ಮತ್ತು ದಾಖಲೆಗೆ ಸಹಿ ಮಾಡಿರುವುದಿಲ್ಲ. ಮನೆಯ ಮಾರಾಟದ ಮಾತುಕತೆ ಸಮಯದಲ್ಲಿ ನಾನು ಮತ್ತು ವಾದಿ ಸಾಕ್ಷಿ 3 ರವರು ಹಾಜರಿದ್ದೆವು. ಅಲ್ಲಿ ಯಾವುದೇ ಬರವಣಿಗೆ ಆಗಿರುವುದಿಲ್ಲ. ನಾನು ಮತ್ತು ವಾದಿ ಸಾಕ್ಷಿ 3 ಬೇರೆ ಬೇರೆ ಊರಿನವರು ಎಂದರೆ ಸರಿ. ನಾನು ಮತ್ತು ವಾದಿ ಸಾಕ್ಷಿ 3 ವಾದಿ ಮತ್ತು ಪ್ರತಿವಾದಿಯ ಸಂಬಂಧಿಕರು ಆಗಿರುವುದಿಲ್ಲ ಮತ್ತು ಅವರ ಜನಾಂಗದವರು ಆಗಿರುವುದಿಲ್ಲ. ನಾನು ಮತ್ತು ವಾದಿ 23 ವರ್ಷಗಳಿಂದ ಪರಿಚಯಸ್ಥಗಿರುವುದರಿಂದ ಪಂಚಾಯಿತಿ ಮಾಡಿ ಮಧ್ಯಸ್ಥಿಕೆ ಮಾಡಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ 2 ನೇ ಕಂಡಿಕೆಯಲ್ಲಿ ಹೇಳಿರುವ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇರುತ್ತದೆ. ನೀವು ಬ್ಯಾಂಕಿಗೆ ಹೋಗಿ ಪಾವತಿ ಮಾಡಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಪ್ರತಿವಾದಿ ಬಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 3 ಲಕ್ಷ ರೂಪಾಯಿಗೆ ಪ್ರತಿವಾದಿ ವಾದಿಗೆ ಚೆಕ್ಕು ನೀಡಿರುವ ವಿಚಾರ ನನಗೆ ಗೊತ್ತಿರುತ್ತದೆ. ನನ್ನ ಸಮಕ್ಷಮ ಕ್ರಯದ ಬಾಬ್ತು ಉಳಿಕೆ 8 ಲಕ್ಷದ 68 ಸಾವಿರ ರೂಪಾಯಿ ನೋಂದಣಿ ಮಾಡಿಸುವ ಸಮಯದಲ್ಲಿ ಕೊಡುತ್ತೇನೆಂದು ಯಾವುದೇ ಬರವಣಿಗೆ ಆಗಿರುವುದಿಲ್ಲ. ನನ್ನ ಮುಖ್ಯ

ವಿಚಾರಣೆಯ 2 ನೇ ಕಂಡಿಕೆಯಲ್ಲಿ ಹೇಳಿರುವ ವ್ಯವಹಾರವು ನನ್ನ ಮುಂದೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಕಂಡಿಕೆಯಲ್ಲಿ ಹೇಳಿರುವ ವ್ಯವಹಾರವನ್ನು ವಾದಿಗೆ ಸಹಾಯ ಮಾಡಲು ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ, ಆ ರೀತಿ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. 4 ನೇ ಕಂಡಿಕೆಯಲ್ಲಿ ಹೇಳಿದ ವಿಚಾರವನ್ನು ವಾದಿಯು ನನಗೆ ಹೇಳಿರುತ್ತಾರೆ. ನಿಪಿ 1 ಕ್ರಯಪತ್ರವು ಎಷ್ಟು ಮೌಲ್ಯಕ್ಕೆ ಆಗಿರುತ್ತದೆಂದು ನನಗೆ ಗೊತ್ತಿಲ್ಲ ಮತ್ತು ಸದರಿ ಸಮಯದಲ್ಲಿ ನಾನು ನೋಂದಣಿ ಕಚೇರಿಗೆ ಹೋಗಿರುವುದಿಲ್ಲ. ವಾದಿಗೆ ಸಹಾಯ ಮಾಡಲು ಕಟ್ಟು ಕತೆಯನ್ನು ಕಟ್ಟಿ ವಾದಿಯು ಹೇಳಿದಂತೆ ಮುಖ್ಯ ವಿಚಾರಣೆಯಲ್ಲಿ ವಿಚಾರವನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರಗೂರಿನಲ್ಲಿ ಆಸ್ತಿ ಮಾರಾಟ ಮಾಡುವ ಖರೀದಿ ಮತ್ತು ಮಾರಾಟ ಮಾಡುವ ವ್ಯವಹಾರವನ್ನು ಮಾಡುವುದಿಲ್ಲ. ನಾನು ನಮ್ಮ ಊರಿನ ಯಜಮಾನ ಆಗಿರುವುದಿಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.